ವಿಶ್ವವಾಣಿ
ವಿರಾಮ
@vishwavaninews
ಬೆಂಗಳೂರು
ಗುರುವಾರ
02.04.2024

ಅನುದಿನವೂ ವಿರಾಮಕ್ಕೆ ಒಂದು ನೆಪ



ಬಿ ಪಾಸಿಟಿವ್

ಪೊಸೆಸ್ಸಿವ್‌ನೆಸ್ ಅತಿಯಾಗದಿರಲಿ

ನೀನನಗೆ ಮಾತ್ರ ಅನ್ನೋ ಪೊಸೆಸ್ಸಿವ್‌ನೆಸ್ ಅತಿಯಾದರೆ ಅನುಭವಿಸುವವರಿಗೆ ಉಸಿರು ಕಟ್ಟಿದಂತೆ! ಪ್ರೀತಿ ಅಭಿಮಾನ ಮತ್ತು ಹೊಂದಾಣಿಕೆ ಪರಸ್ಪರ ಇಬ್ಬರ ನಡುವೆ ಬೆರೆತಾಗಲೇ ಸಂಬಂಧಗಳಿಗೆ ಅರ್ಥ ಸಿಗುವುದು ! ನನಗೆ ಮಾತ್ರ ಸಿಗಬೇಕು ನನಗೆ ಬಿಟ್ಟು ಬೇರೆ ಯಾರಿಗೂ ಸಿಗಲೇ ಬಾರದು ಎನ್ನುವ ಅತಿಯಾದ ಪ್ರೀತಿಯು ಹಿಂಸೆಯಾಗಿ ಪರಿವರ್ತನೆ ಆಗುತ್ತದೆ. ನನ್ನ ಜತೆಗೆ ಇರುವವರು ನನ್ನ ಇಷ್ಟದಂತೆ ಬದುಕಬೇಕು, ನಾನು ಮಾಡಿದ್ದೂ ಸರಿ? ನಾನು ಹೇಳಿದ್ದೆ ಸರಿ? ನನ್ನದೇ

ನಡೆಯಬೇಕು? ನಾನು ಹೇಳಿದಂತೆ ನಡೆದುಕೊಳ್ಳಬೇಕು ಎಂದು ಮಾನಸಿಕ ಹಾಗೂ ದೈಹಿಕ ಹಿಂಸೆ ಕೊಡುತ್ತ ಅವರನ್ನು ನೆಮ್ಮದಿಯಾಗಿ ಬದುಕಲು ಬಿಡದೆ ಹೋದಾಗ ಶಾಶ್ವತವಾಗಿ ಆ ಸಂಬಂಧವನ್ನು ಕಳೆದು ಕೊಳ್ಳುವ ಸಾಧ್ಯತೆಯೆ ಹೆಚ್ಚು. ಅವರಿಗೆ ಅವರ ಇಷ್ಟದಂತೆ ಬದುಕುವ ಸ್ವಾತಂತ್ರ್ಯ ಹೊಂದಿರುತ್ತಾರೆ ಅವರ ಆತ್ಮಾಭಿಮಾನಕ್ಕೆ ಪದೇ ಪದೇ ಪೆಟ್ಟು ಬಿದ್ದಾಗ ಸಹನೆಯೂ ಕೂಡ ಅಂತ್ಯವಾಗುತ್ತದೆ ಮತ್ತು ಸಂಬಂಧದ ಮೇಲೆ ಬೇಸರ ಉಂಟಾಗಿ ದೂರ ಸರಿಯಲು ಪ್ರಯತ್ನಿಸುತ್ತಾರೆ. ಒಬ್ಬರನ್ನು ಹಿಡಿತದಲ್ಲಿ ಇಟ್ಟುಕೊಂಡು ಸರ್ವಾಧಿಕಾರದಿಂದ ಅವರ ಬದುಕಿನ ಪ್ರತಿಯೊಂದು ವಿಷಯದಲ್ಲೂ ಮೂಗು ತೋರಿಸುತ್ತ ಹೋದಂತೆ ಅನುಭವಿಸು ವವರಿಗೆ ವೈಯಕ್ತಿಕವಾಗಿ ಹಿಂಸೆ ಅನ್ನಿಸಿ ಸಂಬಂಧ ತೊರೆದು ಬಿಡಲು ನಿರ್ಧಾರಿ ಸುತ್ತಾರೆ. ಜೀವನಪೂರ್ತಿ ಇಂಥ ಸಂಬಂಧದಲ್ಲಿ ಬದುಕಲು ಇಚ್ಛಿಸು ವುದಿಲ್ಲ. ಅತಿ ಆದ್ರೆ ಎಲ್ಲವು ಕಷ್ಟ ಮಿತಿ ಯಲ್ಲಿ ಇದ್ದರೆ ಅರ್ಥ ಸಿಗಬಹುದು? ಸಿಕ್ಕವರನ್ನು ಕಳೆದುಕೊಂಡು ನಮಗೆ ಅವರು ಸಿಕ್ಕಿಲ್ಲ ಅವರು ಖುಷಿ ಆಗಿರಬಾ ರದು ಅಂತ ಅವರಿಗೆ ಮಾನಸಿಕ ನೋವು ವೇದನೆ ಕೊಟ್ಟಲ್ಲಿ, ತಾವು ಖುಷಿ ನೆಮ್ಮದಿ ಯನ್ನು ಕಳೆದುಕೊಂಡು, ಮಾನಸಿಕವಾಗಿ ಕುಗ್ಗಿ ಹೋಗುವಿರಿ. ಇಬ್ಬರಲ್ಲೂ ಪ್ರೀತಿ, ಭಾವನೆ, ಕಾಳಜಿ ಮತ್ತು ನಂಬಿಕೆ ಜತೆಗೆ ಬಿಟ್ಟು ಬದುಕಲಾರೆ ಎನ್ನುವ ಭಾವ ಮತ್ತು ಬಯಕೆ ಇದ್ದಾಗಲೇ ಸಂಬಂಧ ಉಳಿಯಲು ಸಾಧ್ಯ.

● ವಾಣಿ ಮೈಸೂರು

ಲವ್‌ಎವೆರಿ ಬಾಡಿ

ನಮ್ಮ ದೇಹಕ್ಕೆ ಶಕ್ತಿ, ಸೌಂದರ್ಯ ನೀಡುವಲ್ಲಿ ಜೀವಸತ್ವಗಳ ಪಾತ್ರ ಅಪಾರ. ದೇಹಕ್ಕೆ ಎಲ್ಲ ಜೀವಸತ್ವಗಳೂ ನಿರ್ದಿಷ್ಟ ಪ್ರಮಾಣದಲ್ಲಿ ಅಗತ್ಯ. ಯಾವುದೇ ಒಂದರಲ್ಲಿ ವ್ಯತ್ಯಯವಾದರೂ ಸಮಸ್ಯೆ ಆರಂಭವಾಗುತ್ತದೆ. ಅದರಲ್ಲೂ ವಿಟಾಮಿನ್‌ಗಳ ಕೊರತೆಯೇ ವ್ಯಕ್ತಿಯ ಸೌಂದರ್ಯವನ್ನು ಹಾಳುಗೆಡವಲು ಕಾರಣವಾಗುತ್ತದೆ ಎಂಬುದು ತಜ್ಞರ ಅಭಿಪ್ರಾಯ. ಅಗತ್ಯ ವಿಟಾಮಿನ್‌ಗಳನ್ನು ಪಡೆದಲ್ಲಿ ದೇಹ ವಯಸ್ಸಿಗೆ ತಕ್ಕಷ್ಟು ತೂಕವನ್ನೂ, ಶಕ್ತಿಯನ್ನೂ ಪಡೆದಿರುತ್ತದೆ. 'ಎ' ವಿಟಾಮಿನ್ ದೇಹ ಸುಕ್ಕಾಗುವುದನ್ನು ತಪ್ಪಿಸಬಲ್ಲುದು. ಎ ವಿಟಾಮಿನ್ ಹೇರಳವಾಗಿರುವ ಕ್ಯಾರೆಟ್, ಮಾವಿನಹಣ್ಣು, ಪಪ್ಪಾಯ, ಟೊಮ್ಯಾಟೋ, ಕ್ಯಾಬೇಜ್, ಬಸಳೆ ಮುಂತಾದ ಆಹಾರ ಪದಾರ್ಥಗಳನ್ನು ಸೇವಿಸುವುದರಿಂದ ಚರ್ಮ ಕೋಮಲವಾಗಿಯೇ ಇರುತ್ತದೆ. ಯೌವನವನ್ನು ಕಳೆದುಕೊಳ್ಳದಿರುವುದಕ್ಕೆ ಇದೊಂದು ಉತ್ತಮ ದಾರಿ.

● ದೇಹಾಭಿ'ಮಾಣಿ'

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687, ಮೊದಲ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್:
vishwavanimagazine@gmail.com

ತಲ್ಲಣವೇಕೆ ನಮ್ಮ ಪಯಣದತಿ?



ಅತಿಯಾದ ಒತ್ತಡವನ್ನು ಮೈಮೇಲೆ ಎಳೆದುಕೊಳ್ಳುವ ಪ್ರವೃತ್ತಿ, ಆದಷ್ಟು ಬೇಗ ಎಲ್ಲಾ ಕೆಲಸ ಮುಗಿಸಿಬಿಡಬೇಕೆಂಬ ಧಾವಂತ, ಜತೆಗಿರುವವರ ಅತಿಯಾದ ನಿರೀಕ್ಷೆ, ಇದೆಲ್ಲದರ ಪರಿಣಾಮವೇ ದೈಹಿಕ ಮತ್ತು ಮಾನಸಿಕ ಅನಾರೋಗ್ಯ. ಆದರೆ ಅರಿವು ಮೂಡುವ ಹೊತ್ತಿಗೆ ಕಾಲವೇ ಮಿಂಚಿಹೋಗಿ, ಜೀವನದ ಪಯಣವೂ ಮುಗಿದಿರುತ್ತದೆ.

ಜೋಷ್ ಮಾತು
● ವಿಕ್ರಮ್ ಜೋಶಿ

ಅವನು ಸೂಟು-ಬೂಟುಗಳನ್ನು ಧರಿಸಿಯೇ ಹಾಸಿಗೆಯ ಮೇಲೆ ಅಂಗಾತ ಮಲಗಿ, ಗಾಢ ನಿದ್ದೆ ಹೋಗಿದ್ದ. ಮಂಚದಿಂದ ಇಳಿಬಿಟ್ಟ ಬಲಗೈಯಲ್ಲಿ ನೆಲದ ಮೇಲಿಟ್ಟ ಸೂಟ್‌ಕೇಸಿನ ಹಿಡಿಕೆಯನ್ನು ಗಟ್ಟಿಯಾಗಿ ಹಿಡಿದಿದ್ದ. ಎಡಗೈಯನ್ನು ಹಾಸಿಗೆಯ ಇನ್ನೊಂದು ಅಂಚಿನತ್ತ ನಿಡಿದಾಗಿ ಚಾಚಿದ್ದ. ಬೂಟು ಹಾಕಿದ ಕಾಲುಗಳು ಒಂದನ್ನೊಂದು ಬಳಸಿದ್ದವು. ದಿಂಬಿನ ಮೇಲೆ ವಿಶ್ರಮಿಸಿದ, ಕ್ರಾಪು ಬಾಚಿದ, ತಲೆ ತುಸು ಬಲಕ್ಕೆ ವಾಲಿತ್ತು.

ಡಾಕ್ಟರು ಪರೀಕ್ಷಿಸಿ, ಅವನು ಹೋಗಿ ಮುಕ್ಕಾಲು ಗಂಟೆಯಾದರೂ ಆಗಿರಬೇಕು ಎನ್ನುತ್ತಾ ಕೈಗಡಿಯಾರ ನೋಡಿ ಕೊಂಡಾಗ ಐದು ಮುಕ್ಕಾಲು ಗಂಟೆ. ಭಯಗ್ರಸ್ತನಾಗಿ ಹತ್ತಿರ ನಿಂತ ಸೇವಕ, 'ಸರಿಯಾಗಿ ಐದು ಗಂಟೆಗೆ ತಾನು ಹೊರಡಬೇಕು, ನಾಲ್ಕು ಗಂಟೆಗೆ ಎಬ್ಬಿಸು ಎಂದಿದ್ದರು ಸರ್,' ಎಂದ ನಡುಗುತ್ತ.

ಮೇಲಿನ ಸಾಲುಗಳನ್ನು ಯಶವಂತ ಚಿತ್ತಾಲರ ಪಯಣ ಎಂಬ ಕತೆಯ ಕೊನೆಯ ಭಾಗದಿಂದ ತೆಗೆದುಕೊಳ್ಳಲಾಗಿದೆ. ಈ ಕತೆಯನ್ನು ಓದಾಗಿನಿಂದ ಮನಸ್ಸು ಭಾರ. ಕಥಾನಾಯಕ ಹಾಗೂ ಅವನು ತನ್ನ ಸುತ್ತ ಸೃಷ್ಟಿಸಿಕೊಂಡಿದ್ದ ಚಕ್ರವ್ಯೂಹವು ಮನಸ್ಸಿನಿಂದ ಹೊರಗಡೆಗೆ ಹೋಗುವುದಕ್ಕೇ ತಯಾರಿಲ್ಲ. ಇಪ್ಪತ್ತನೇಯ ಶತಮಾನದ ಕೊನೆಯ ಭಾಗದಲ್ಲಿ ಪ್ರಕಟವಾದ ಈ ಕತೆಯು ಇಂದಿಗೂ ಪ್ರಸ್ತುತ. ಸೇಲ್ಸ್‌ಮ್ಯಾನ್ ಆಗಿ ಕೆಲಸ ಮಾಡುತ್ತಿರುವ ಸುಮಾರು ನಲವತ್ತು ವಯಸ್ಸಿನ ವ್ಯಕ್ತಿಯ ಕುರಿತಾದ ಕತೆ 'ಪಯಣ'.

ಮದುವೆ, ಮಕ್ಕಳಿಲ್ಲದ ಆತನು ಕಾಲಿಗೆ ಚಕ್ರ ಕಟ್ಟಿಕೊಂಡವನಂತೆ ಆಫೀಸ್ ಕೆಲಸಕ್ಕಾಗಿ ತಿರುಗಾಡುತ್ತಿದ್ದ. ಕೊಟ್ಟ ಕೆಲಸವನ್ನು ನಿರಾಕರಿಸದೆ ಮಾಡುವ ರೂಢಿ ಚಿಕ್ಕವಯಸ್ಸಿನಿಂದಲೇ ಬಂದುಬಿಟ್ಟಿತ್ತು. ಇನ್ನೊಬ್ಬರಿಗೆ ಮಾನಸಿಕ ಹಿಂಸೆಯನ್ನು ಕೊಟ್ಟು ಅದರಲ್ಲಿ ಸಂತೃಪ್ತಿಯನ್ನು ಪಡೆಯುವ ಕ್ರೂರ ಪ್ರವೃತ್ತಿಯೂ ಆತನಲ್ಲಿ ಬೆಳೆದಿತ್ತು. ಬಹುವ್ಯಕ್ತಿತ್ವದ ಅಸ್ವಸ್ಥತೆ ಕೂಡ ಅವನಲ್ಲಿ ಇತ್ತು. ವೃತ್ತಿಗೆ ಬಂದರೆ ಆ ವ್ಯಕ್ತಿಗೆ ಕೆಲಸವೆಂದರೆ ಜೀವ. ತಿರುಗಾಟವೇ ಮೇಲು.



ಸಮಯಕ್ಕೆ ಸರಿಯಾಗಿ ಯಾವುದೂ ಆಡತಡೆಗಳಿಲ್ಲದೆ ಮಾಡಿ ಮುಗಿಸಬೇಕು ಎನ್ನುವ ತಲ್ಲಣ. ಇವೆಲ್ಲದರ ನಡುವೆ ಆತನ ವೇಗದ ಬದುಕಿನ ಪಯಣದಲ್ಲಿ ವಿಶ್ರಾಂತಿಗೆ ಸಮಯವೇ ಇಲ್ಲ. ಇಂದೋ, ನಾಳೆಯೋ ಅಥವಾ ಮರುಕ್ಷಣವೇ ಹಾರಿಹೋಗುವ ಪ್ರಾಣಪಕ್ಷಿಯ ಬಗ್ಗೆ ಗೊತ್ತಿದ್ದೂ ಅದನ್ನು ದೇಹದಲ್ಲೇ ಸದಾಕಾಲ ಬಂಧಿಸಿ ಇಟ್ಟಿಕೊಂಡಿದ್ದೇನೆ ಎನ್ನುವ ಭಾವನೆ. ಆತ ಯಾಕೆ ಹೀಗಾದ? ಎಲ್ಲಿಗೆ ಪಯಣ? ಬದುಕಿನಲ್ಲಿ ಇಷ್ಟೊಂದು ಕಸರತ್ತು ಮಾಡಬೇಕಾ? ಕತೆಯನ್ನು ಓದಿ ಮುಗಿಸಿದ ಮೇಲೆ ಈ ತರಹದ ಪ್ರಶ್ನೆಗಳೆದ್ದು, ತುಂಬಾ ಕಾಡುತ್ತವೆ.

ಇದಕ್ಕೆ ಸಂಬಂಧಿಸಿ ನಮ್ಮ ಸುತ್ತ ಮುತ್ತಲೂ ನಡೆಯುತ್ತಿರುವ ಕೆಲವು ಮಾನಸಿಕ ಆರೋಗ್ಯದ ಕುರಿತಾದ ಗಂಭಿರವಾದ ವಿಷಯಗಳನ್ನು ನಾವು ಚರ್ಚಿಸಬೇಕು :

- **ಮ್ಯಾಕೆಂಜಿ ಹೆಲ್ತ್ ಇನ್ಸ್ಟಿಟ್ಯೂಟ್ ನಡೆಸಿರುವ ಒಂದು ಸಮೀಕ್ಷೆಯ ಪ್ರಕಾರ ಭಾರತೀಯ ಉದ್ಯೋಗಿಗಳು (62%ರಷ್ಟು) ಅತ್ಯಧಿಕ ಮಟ್ಟದ ಕಾರ್ಯಸ್ಥಳದ ನಿತ್ರಾಣವನ್ನು ವರದಿ ಮಾಡಿದ್ದಾರೆ, ನಂತರದ್ದು ಜಪಾನ್ (61%).**
- **ಬಾಡಿ ಮಾಸ್ ಇಂಡೆಕ್ಸ್ ಎನ್ನುವುದು ನಾವು ಎಷ್ಟು ಸ್ವಸ್ಥರಾಗಿದ್ದೇವೆ ಎಂದು ತಿಳಿಸುವ ಸೂಚ್ಯಂಕ. ಒಂದು ಸಮೀಕ್ಷೆಯ ಪ್ರಕಾರ ಭಾರತದಲ್ಲಿ ಆರೋಗ್ಯಕರ ಬಿಎಂಐ ಶ್ರೇಣಿಯಲ್ಲಿನ ಕಾರ್ಪೊರೇಟ್ ಉದ್ಯೋಗಿಗಳ ಶೇಕಡಾವಾರು ಪ್ರಮಾಣವು 50% ಕ್ಕಿಂತ ಕಡಿಮೆಯಿದೆ. ಇದು ಭಾರತದಲ್ಲಿನ ಬಹುಪಾಲು ಕಾರ್ಪೊರೇಟ್ ಉದ್ಯೋಗಿಗಳು ಸಂಭಾವ್ಯ ಅಪಾಯದಲ್ಲಿರುವುದರ ಸೂಚಕ.**
- **ಇಬ್ಬರಲ್ಲಿ ಒಬ್ಬ ಭಾರತೀಯ ಕಾರ್ಪೊರೇಟ್ ಉದ್ಯೋಗಿಯು ಮಾನಸಿಕ ಅಸ್ವಸ್ಥತೆಯ ಅಪಾಯದಲ್ಲಿದ್ದಾರೆ ಎಂದು ಎಮ್‌ಪವರ್ ಸಮೀಕ್ಷೆಯು ನೀಡಿದ ಎಚ್ಚರಿಕೆ.**
- **ಭಾರತೀಯರ ಮಾನಸಿಕ ಆರೋಗ್ಯವನ್ನು ಹದಗೆಡಿಸುತ್ತಿರುವುದು 'ನಿರಂತರವಾಗಿ ಕೆಲಸದಲ್ಲೇ ಇದ್ದೇನೆ -All ways on work' ಎನ್ನುವ ಪ್ರವೃತ್ತಿ.**
- **ಕಾರ್ಯಸ್ಥಳದ ಒತ್ತಡವು ಒಂದು ಜಾಗತಿಕ ಪಿಡುಗು ಎಂಬುದಾಗಿ ಸಿಗ್ನಾ 360 ವೆಲ್ ಬಿಯಿಂಗ್ ಸರ್ವೆ ಘೋಷಿಸಿದೆ.**
- **ಭಾರತೀಯ ಕಾರ್ಪೋರೆಟ್ ಜಗತ್ತಿನಲ್ಲಿ ಮಾನಸಿಕ ಆರೋಗ್ಯದ ಸಮಸ್ಯೆಯು 'ಕೋಣೆಯೊಳಗೆ ಬಂದು ನಿಂತ ಆನೆಯಂತಾಗಿದೆ' ಎಂದು ಹಲವಾರು ಸಮೀಕ್ಷೆಗಳು ಸತತವಾಗಿ ವರದಿಗಳನ್ನು ಮಾಡುತ್ತಲೇ ಇವೆ.**
- **ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಖಿನ್ನತೆ ಹಾಗೂ ಆತಂಕ ಇವು ಇವತ್ತಿನ ಪ್ರಮುಖ ಮಾನಸಿಕ ಆರೋಗ್ಯ ಸಮಸ್ಯೆಗಳು. ಅದರ ಅಂದಾಜಿನ ಪ್ರಕಾರ ಜಗತ್ತು ಪ್ರತಿ ವರ್ಷ ಈ ಸಮಸ್ಯೆಗಳಿಂದಾಗಿ ಒಂದು ಟ್ರಿಲಿಯನ್ ಡಾಲರ್‌ಗಳಷ್ಟು ಹಣವನ್ನು ಉತ್ಪಾದಕತೆಯ ನೆಲೆಯಲ್ಲಿ ವೆಚ್ಚಮಾಡುತ್ತಿದೆ.**
- **ಒಂದು ವರ್ಷದ ಅವಧಿಯಲ್ಲಿ ಸಂಸ್ಥೆಯೊಂದು ನಡೆಸಿದ ಸಮೀಕ್ಷೆಯ ಪ್ರಕಾರ 80% ಭಾರತೀಯ ಕಾರ್ಪೊರೇಟ್ ಉದ್ಯೋಗಿಗಳು ಮಾನಸಿಕ ಆರೋಗ್ಯದ ತೊಂದರೆಯಿಂದ ಬಳಲುತ್ತಿದ್ದಾರಂತೆ.**
- **ಇದಲ್ಲದೆ, ಒಂದು ಗಮನಾರ್ಹ ವಿಷಯವೆಂದರೆ ಸುಮಾರು 75% ಟೆಕ್ಕಿಗಳು ತಮ್ಮ ಕೌಟುಂಬಿಕ ಹಬ್ಬಗಳನ್ನು, ಕಾರ್ಯಕ್ರಮಗಳನ್ನು, ಸಂತೋಷಾಚರಣೆಗಳನ್ನು ತಪ್ಪಿಸಿಕೊಳ್ಳುತ್ತಿದ್ದಾರಂತೆ. ಇದಕ್ಕೆ ಮುಖ್ಯ ಕಾರಣ ಕೆಲಸದ ಒತ್ತಡ ಎಂದು ಆ ಸಂಶೋಧನೆಯು ಹೇಳುತ್ತಿದೆ.**
- **ನ್ಯಾಶನಲ್ ಕ್ರೈಮ್ ರೆಕಾರ್ಡ್ಸ್ ಬ್ಯೂರೋ ಪ್ರಕಾರ ಪ್ರತಿ ವಾರವೂ ವೃತ್ತಿಗೆ ಸಂಬಂಧಿಸಿದ ಕಾರಣಗಳಿಗಾಗಿ ನಾಲ್ಕು ಆತ್ಮಹತ್ಯೆಗಳು ಆಗುತ್ತಿವೆ.**

ತಲ್ಲಣಿಸದಿರು ಕಂಡ್ಯ ತಾಳು ಮನವೇ
ಎಲ್ಲರನು ಸಲಹುವನು ಇದಕೆ ಸಂಶಯ ಬೇಡ ||
ಅಡವಿಯೊಳಗೆ ಮೃಗ ಪಕ್ಷಿಗಳಿಗೆಲ್ಲ
ಅಡಿಗಡಿಗೆ ಆಹಾರವಿತ್ತವರು ಯಾರೊ
ಪಡೆದ ಜನನಿಯ ತೆರದಿ ಸ್ವಾಮಿ ಹೊಣೆಗೀಡಾಗಿ
ಬಿಡದೆ ರಕ್ಷಿಪನು ಇದಕೆ ಸಂಶಯವಿಲ್ಲ ||

ಎನ್ನುವ ಮೇಲಿನ ಕನಕದಾಸರ ಕೃತಿಗಳ ಸಾಲುಗಳು ಹೇಳುವಂತೆ ನಮ್ಮನ್ನು ಹುಟ್ಟಿಸಿದ ದೇವರಿಗೆ ರಕ್ಷಿಸುವುದು ಗೊತ್ತಿಲ್ಲವೇ? ಯಾಕೆ ನಮ್ಮಲ್ಲಿ ಈ ವಿಪರೀತ ತಲ್ಲಣ? ನಾವು ಅತಿಯಾದ ಚಿಂತೆಯನ್ನು ಮಾಡಿ ಖಿನ್ನತೆ ಹಾಗೂ ಆತಂಕಕ್ಕೆ ಒಳಪಟ್ಟು ನಮ್ಮ ಪಾಲಿನ ನೆಮ್ಮದಿಯ ಪಯಣವನ್ನು ಹಾಳುಮಾಡಿಕೊಳ್ಳಬಾರದು. ಗುರಿ ಅವನಿಗೆ ಗೊತ್ತು, ಪಯಣದ ಸುಖ ನಮ್ಮ ಕೈಯಲ್ಲಿದೆ ; ಅದರ ಮೂಲ ಮನಸ್ಸು, ಅದು ಹಿತವಾಗಿರಲಿ.





ಮೊದಲ ಮಾನವರಹಿತ ವಿಮಾನದ ಪ್ರವರ್ತಕ

ಶಿವಕರ್ ತಲ್ಪಾಡೆ

ವಿಮಾನವನ್ನು ಕಂಡು ಹಿಡಿದವರು ಯಾರು ಎಂದು ಯಾರನ್ನಾದರೂ ಕೇಳಿದರೆ ರೈಟ್ ಸಹೋದರರು ಎಂದು ಹೇಳುತ್ತಾರೆ. ಆದರೆ ರೈಟ್ ಸಹೋದರರಿಗಿಂತಲೂ ಮೊದಲು ಮಾನವರಹಿತ ವಿಮಾನವನ್ನು ಒಬ್ಬ ಭಾರತೀಯ ವಿದ್ವಾಂಸ ನಿರ್ಮಿಸಿದ ಎಂಬ ಸತ್ಯ ಸಂಗತಿಯ ಬಗ್ಗೆ ನಿಮಗೆ ಗೊತ್ತೇ?

ಯಶೋಗಾಥೆ
● ಸುರೇಂದ್ರ ಪೈ, ಹೊಸದುರ್ಗ

ರೈಟ್ ಸಹೋದರರು ಡಿಸೆಂಬರ್ 17, 1903 ರಂದು ಉತ್ತರ ಕೆರೊಲಿನಾದ ಕಿಟ್ಟಿ ಹಾಕ್‌ನಿಂದ ದಕ್ಷಿಣಕ್ಕೆ 4 ಮೈಲಿ (6 ಕಿಮೀ) ದೂರದಲ್ಲಿ ಫ್ಲೈಯರ್‌ನೊಂದಿಗೆ, ಗಾಳಿಗಿಂತ ಭಾರವಾದ ವಿಮಾನದ ನಿರಂತರ ಹಾರಾಟವನ್ನು ಮಾಡಿದರು. ಇದನ್ನು ಈಗ ಕಿಲ್ ಡೆವಿಲ್ ಹಿಲ್ಸ್ ಎಂದು ಕರೆಯಲಾಗುತ್ತದೆ. ಹೀಗೆ ಮೊದಲ ವಿಮಾನವನ್ನು ರೈಟ್ ಸಹೋದರರು ಹಾರಿಸಿದರು ಎಂದು ಇಡೀ ಜಗತ್ತಿಗೆ ತಿಳಿದಿದೆ. ಆದರೆ ಜಗತ್ತಿಗೆ ತಿಳಿದಿಲ್ಲದ ಸಂಗತಿಯೆಂದರೆ, ರೈಟ್ ಬ್ರದರ್ಸ್‌ಗಿಂತ 8 ವರ್ಷಗಳ ಮೊದಲು 1895 ರಲ್ಲಿ ಶಿವಕರ್ ಬಾಪೂಜಿ ತಲ್ಪಾಡೆ ಎಂಬ ಭಾರತೀಯ ವಿದ್ವಾಂಸರು ಈಗಾಗಲೇ ಮಾನವರಹಿತ ವಿಮಾನವನ್ನು ತಯಾರಿಸಿ ಆಕಾಶದಲ್ಲಿ ಹಾರಿಸಿದ್ದರು.

ವಿಮಾನದ ಆವಿಷ್ಕಾರಕ್ಕೆ ದೊಡ್ಡ ಕೊಡುಗೆ

ಶಿವಕರ್ ತಲ್ಪಾಡೆ ಅವರು 1864 ರಲ್ಲಿ ಮುಂಬೈನ ಚಿರಾ ಬಜಾರ್ ಪ್ರದೇಶದಲ್ಲಿ ಜನಿಸಿದರು. ಅವರು ಸಂಸ್ಕೃತ , ಸಾಹಿತ್ಯ ಮತ್ತು ವೇದಗಳ ವಿದ್ವಾಂಸರಾಗಿದ್ದರು. ಅವರು ತಮ್ಮ ಸಂಪೂರ್ಣ ಶಿಕ್ಷಣವನ್ನು ಸರ್ ಜೆಮ್ ಶೇಡ್ಜಿ ಜೀಜೀಭೋಯ್ ಸ್ಕೂಲ್ ಆಫ್ ಆರ್ಟ್‌ನಲ್ಲಿ ಪೂರ್ಣಗೊಳಿಸಿದರು. 30 ನೇ ವಯಸ್ಸಿನಲ್ಲಿ, ಅವರು ತಮ್ಮ ಶಿಕ್ಷಕ ಚಿರಂಜಿಲಾಲ್ ವರ್ಮಾ ಅವರ ಮೂಲಕ ಪ್ರಾಚೀನ ಭಾರತೀಯ ಏರೋನಾಟಿಕ್ಸ್ ಬಗ್ಗೆ ತಿಳಿದುಕೊಂಡರು. ಅವರು ಪ್ರಾಚೀನ ಏರೋನಾಟಿಕ್ಸ್‌ಗೆ ಸಂಬಂಧಿಸಿದ ಸ್ವಾಮಿ ದಯಾನಂದ ಸರಸ್ವತಿ ಅವರ ಕೃತಿಗಳನ್ನು ಓದಲು ಪ್ರೋತ್ಸಾಹಿಸಿದರು. ಈ ಗ್ರಂಥಗಳಿಂದ ಪ್ರೇರಿತರಾದ ತಲ್ಪಾಡೆ ಅವರು ವೇದಗಳಲ್ಲಿ ವಿವರಿಸಿರುವ ವೈದಿಕ ವಿಮಾನವನ್ನು ನಿರ್ಮಿಸಲು ನಿರ್ಧರಿಸಿದರು ಮತ್ತು ಅವರು ವೈದಿಕ ಸಂಸ್ಕೃತ ಭಾಷೆಯನ್ನು ಕಲಿಯಲು ಪ್ರಾರಂಭಿಸಿದರು. ತಲಪಾಡೆಯವರು ತಮ್ಮ ಗುರುಗಳಾದ ಶ್ರೀ ಶಾಸ್ತ್ರಿಯವರಿಂದ ನೆರವು ಪಡೆದರು. ಶ್ರೀ ಶಾಸ್ತ್ರಿ ಅವರು ವಿಮಾನದ ಆವಿಷ್ಕಾರಕ್ಕೆ ದೊಡ್ಡ ಕೊಡುಗೆ ನೀಡಿದರು.

ಮರುತ್ ಸಖಾದ ನಾಮಕರಣ

ತಲ್ಪಾಡೆ ಮಕ್ಯುರಿ ಅಯಾನನ್ನು ಇಂಧನವಾಗಿ ಬಳಸಿಕೊಂಡು ಮಾನವರಹಿತ ವಿಮಾನವನ್ನು ರಚಿಸಲು ಪ್ರಾರಂಭಿಸಿದರು. ಅವರು ವಿಮಾನಕ್ಕೆ ಮರುತ್ ಸಖಾ ಎಂದು ಹೆಸರಿಸಲಾಯಿತು. ಅಂದರೆ ಗಾಳಿಯ ಸ್ನೇಹಿತ. ಈ ವಿಮಾನವು ಹಿಂದೂ ಪುರಾಣಗಳಲ್ಲಿ ಪ್ರಾಚೀನ ಹಾರುವ ಯಂತ್ರವಾದ ವಿಮಾನದಿಂದ ಪ್ರೇರಿತವಾಗಿದೆ ಎಂದು ಭಾವಿಸಲಾಗಿದೆ. 1895 ರಲ್ಲಿ, ತಲ್ಪಾಡೆ ಅವರು ನೂರಾರು ಜನಸಮೂಹದ ಮುಂದೆ ಮುಂಬೈ ಬೀಚ್ನಲ್ಲಿ ತಮ್ಮ ವಿಮಾನವನ್ನು ಪ್ರದರ್ಶಿಸಿದರು. ಈ ವಿಮಾನವು ಕೆಲವು ನಿಮಿಷಗಳ ಕಾಲ ಹಾರಾಟವನ್ನು ನಡೆಸಿತು. ಅದು ಸರಿಸುಮಾರು 1,500 ಅಡಿ ಎತ್ತರಕ್ಕೆ ಹಾರಿ ನಂತರ ಭೂಮಿಗೆ ಬಿದ್ದಿತು. ಹೆಚ್ಚಿನ ಸಂಶೋಧನೆಗಾಗಿ ಹಣದ ಅವಶ್ಯಕತೆ ಕಾಡತೊಡಗಿತು. ಆದರೆ ಬ್ರಿಟಿಷರು ಯಾವುದೇ ಸಹಾಯ ದೊರಕದಂತೆ ಮಾಡಿ ಇತನ ಸಂಶೋಧನೆಯ ರಹಸ್ಯವನ್ನು ತಿಳಿಯಲು



ಗೂಢಾಚಾರಿಗಳನ್ನು ನೇಮಿಸಿದರು.

ಕೊನೆಗೆ ಬ್ರಿಟಿಷ್ ಸರ್ಕಾರವು ಪಾದರಸದಿಂದ ಸ್ಫೋಟಕಗಳನ್ನು ತಯಾರಿಸುತ್ತಿದೆ ಎಂದು ಆರೋಪಿಸಿ ಅವರನ್ನು ಬಂಧಿಸಿತು. ಭಾರತೀಯರು ಇಂತಹ ಯಾವುದೇ ಆವಿಷ್ಕಾರವನ್ನು ಮಾಡಲು ಬ್ರಿಟಿಷರಿಗೆ ಇಷ್ಟವಿರಲಿಲ್ಲ. ಜೊತೆಗೆ ಮಕ್ಯುರಿ ಅಯಾನ್ ಎಂಜಿನ್ ಬಳಸಿ ವಿಮಾನಗಳು ಹಾರಬಲ್ಲವು ಎಂಬುದನ್ನು ಒಪ್ಪಿಕೊಳ್ಳಲು ಜಗತ್ತು ಸಿದ್ಧವಿರಲಿಲ್ಲ.

ಈ ಮಹಾನ್ ಆವಿಷ್ಕಾರದ ಹೊರತಾಗಿಯೂ ಅವರು ತಮ್ಮ ಇಡೀ ಜೀವನದಲ್ಲಿ ಯಾವ ಪೇಟೆಂಟ್ ಆಗಲಿ , ಪುರಸ್ಕಾರವನ್ನಾಗಲಿ ಮರುತ್ ಸಖಾ , ಮನ್ನಣ